**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ**

**ಸಿ.ಸಿ.ನಂ.770/2025**

ಫಿರ್ಯಾದಿಃ ಕರ್ನಾಟಕ ಸರ್ಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ 1 : ಪ್ರಕಾಶ ತಂದೆ ತಿಪ್ಪಣ್ಣ ಪೂಜಾರಿ
ವಃ 19 ವರ್ಷ, ಉಃ ಒಕ್ಕಲುತನ **(Abated)**

2. ಸುರೇಶರೆಡ್ಡಿ ತಂದೆ ಪುಂಡರೆಡ್ಡಿ
ವಃ 20 ವರ್ಷ, ಉಃ ಚಾಲಕ ಕೆಲಸ**(Abated)**

3. ತಿಪ್ಪಣ್ಣ ತಂದೆ ಸಾಬಣ್ಣ ಮೋಳನ್ವರ
ವಃ 45 ವರ್ಷ, ಉಃ ಒಕ್ಕಲುತನ
ಎಲ್ಲರೂ ಸಾಃ ಹಾಬಾಳ ಟಿ. ಗ್ರಾಮ, ತಾಃ ಸೇಡಂ
ಜಿಃ ಕಲಬುರಗಿ

-----

**ಆವಾದನೆ**

ನಾನು ಶ್ರೀ ಬಾಲು, ಬಿ.ಎ., ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 07-03-2025 ರಂದು ಮುಂಜಾನೆ 10.10 ಗಂಟೆ ಸುಮಾರಿಗೆ ಸೇಡಂ ಪೊಲೀಸ ಠಾಣೆಯ ವ್ಯಾಪ್ತಿಯ ಹದ್ದಿಯ ಪೈಕಿ ಚಾಸಾ14 ರವರ ಮಗನಾದ ಸುರೇಶರೆಡ್ಡಿ ಈತನು ತನ್ನ ಮೋಟಾರ ಸೈಕಲ ನಂ. KA-32 HJ 1788 ನೇದ್ದರ ಹಿಂದುಗಡೆ ಚಾಸಾ.1 ರವರ ಮಗನನಾದ ಸಿದ್ದಪ್ಪನನ್ನು ಕೂಡಿಸಿಕೊಂಡು ಹಾಬಾಳ ಟಿ ಯಲ್ಲಮ್ಮಗೇಟ್ ಮುಖ್ಯ ರಸ್ತೆಯ ಜಗ್ಗು ತಂದೆ ಲಕ್ಷ್ಮಣ ತಳವಾರ ಇವರ ಹೊಲದ ಹತ್ತಿರ ರೋಡಿನ ಮೇಲೆ ಸೇಡಂ ಕಡೆ ಹೋಗುವಾಗ ಆರೋಪಿ.1 ನೇದ್ದವನು ತನ್ನ ಮೋಟಾರ ಸೈಕಲ ನಂ. KA 32 EF 7675 ನೇದ್ದರ ಹಿಂದಜೆ ಚಾಸಾ.17 ರವರ ಮಗನಾದ ಮಲ್ಲಿಕಾರ್ಜುನ ಈತನನ್ನು ಕೂಡಿಸಿಕೊಂಡು ಯಲ್ಲಮ್ಮಗೇಟ್ ಕಡೆಯಿಂದ ತನ್ನ ವಶದಲ್ಲಿದ್ದ ಮೋಟಾರ ಸೈಕಲನ್ನು ಅತೀವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಸೆಡಂ ಕಡೆ ಹೊರಟ ಸುರೇಶರೆಡ್ಡಿ ಈತನ ಮೋಟಾರ ಸೈಕಲಗೆ ಡಿಕ್ಕಿ ಪಡಿಸಿ ಅಪಘಾತವಾಗಿದ್ದು, ಕಾರಣ ಆರೋಪಿತನಾದ ನೀನು ಬಿ ಎನ ಎಸ್. ಕಲಂ.281 ರ ಸಂ 3(5)ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನೋದ್ದೇಶದಿಂದ ಬಂದು, ಆರೋಪಿ.1 ನೇದ್ದವನು ತನ್ನ ಮೋಟಾರ ಸೈಕಲ ನಂ. KA 32 EF 7675

ನೇದ್ದರ ಹಿಂದೆ ಚಾಸಾ.17 ರವರ ಮಗನಾದ ಮಲ್ಲಿಕಾರ್ಜುನ ಈತನನ್ನು ಕೂಡಿಸಿಕೊಂಡು ಅತೀವೇಗ ಹಾಗೂ ನಿಷ್ಕಾಳಜಿತನದಿಂದ ವಾಹನ ಚಲಾಯಿಸಿಕೊಂಡು ಬಂದು ಸೇಡಂ ಕಡೆ ಹೊರಟ ಸುರೆಶರೆಡ್ಡಿ ಈತನ ಮೋಟರ ಸೈಕಲಗೆ ಡಿಕ್ಕಿ ಪಡಿಸಿ ಅಪಘಾತ ಮಾಡಿದಾಗ ಎರಡು ಮೋಟಾರ ಸೈಕಲ ಸವಾರರು ಮೋಟಾರ ಸೈಕಲ ಸಮೇತ ರೋಡಿನ ಮೇಲೆ ಬಿದ್ದು ಗಂಭೀರ ಸ್ವರೂಪದ ಗಾಯಗಳಾದಾಗ, ಚಾಸಾ.12 ರವರು ಚಾಸಾ.13 ರವರ ವಾಹನದಲ್ಲಿ ಗಾಯಾಳುದಾರಿಗೆ ಹಾಕಿಕೊಂಡು ಸೇಡಂ ಸರಕಾರಿ ಆಸ್ಪತ್ರೆಗೆ ಸೇರಿಕೆ ಮಾಡಿದಾಗ ವೈದ್ಯರು ಸಿದ್ದಪ್ಪ ಮತ್ತು ಮಲ್ಲಿಕಾರ್ಜುನ ಇವರನ್ನು ಪರೀಕ್ಷಿಸಿ ಮಾರ್ಗಮಧ್ಯದಲ್ಲಿ ಮೃತಪಟ್ಟಿರುತ್ತಾರೆಂದು ತಿಳಿಸಿದ್ದು ಹಾಗೂ ಸುರೇಶರೆಡ್ಡಿ ಮತತು ಪ್ರಕಾಶ ಇವರಿಗೆ ಜಿಮ್ಸ ಆಸ್ಪತ್ರೆಯ ವೈದರು ಪರೀಕ್ಷಿಸಿ ಸದರಿಯವರು ಮೃತಪಟ್ಟಿರುವರೆಂದು ತಿಳಿಸಿದ್ದು, ಕಾರಣ ಆರೋಪಿತನಾದ ನೀನು ಬಿ ಎನ್ ಎಸ್ ಕಲಂ. 106 ರ ಸಂ. 3(5) ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿರುವ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನೋದ್ದೇಶದಿಂದ ಬಂದು, 3 ನೇ ಆಪಾದಿತನು ವಿಮೆ ಇಲ್ಲದ ತನ್ನ ವಾಹನವನ್ನು ವಾಹನ ಚಾಲನಾ ಪರವಾನಿಗೆ ಪತ್ರ ಇಲ್ಲದ ಆರೋಪಿ.1 ರವರಿಗೆ ಚಲಾಯಿಸಲು ನೀಡಿದ್ದು ಕಲಂ 180 ಐ ಎಮ್ ವಿ ಆಕ್ಟ ಸಂ. 3(5) ಬಿಎನ ಎಸ್ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ.

ನಾಲ್ಕನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆಪಾದಿತರು ಸಮಾನೋದ್ದೇಶದಿಂದ ಕೂಡಿಕೊಂಡು ಬಂದು, ಆರೋಪಿ.1 ನೇದ್ದವನು ಹೆಲ್ಮೆಟ್ ಧರಿಸದೆ, ವಾಹನಾ ಚಾಲನಾ ಪರವಾನಿಗೆ ಇಲ್ಲದೆ, ವಿಮೆ ಇಲ್ಲದ ವಾಹನ ಚಲಾಯಿಸಿದ್ದು ಕಾರಣ ಆರೋಪಿತನಾದ ನೀನು ಕಲಂ 181 ಐ.ಎಮ್.ವಿ. ಆಕ್ಟ ಸಂಗಡ 3(5) BNS ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ.

ಐದನೆಯದಾಗಿ ಮೇಲೆ ಹೇಳಿರುವ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರು ಸಮಾನೋದ್ದೇಶದಿಂದ ಕೂಡಿಕೊಂಡು ಬಂದು, ಆರೋಪಿ .2 ರವರು ಹೆಲ್ಮೆಟ್ ಧರಿಸದೇ ವಾಹನ ಚಲಾಯಿಸಿದ್ದು, ಕಾರಣ ಆರೋಪಿತನಾದ ನೀನು ಐ.ಎಮ್.ವಿ. ಆಕ್ಟ ಕಲಂ 194(D) ಸಂ. 3(5) BNS ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ,

ಕೊನೆಯದಾಗಿ ಮೇಲೆ ಹೇಳಲಾದ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆಪಾದಿತರು ಸಮಾನೋದ್ದೇಶದಿಂದ ಕೂಡಿಕೊಂಡು ಬಂದು, ಆರೋಪಿ.3 ನೇದ್ದವನು ತನ್ನ ವಿಮೆ ಇಲ್ಲದ ವಾಹನವನ್ನು, ವಾಹನ ಚಾಲನಾ ಪರವಾನಿಗೆ ಪತ್ರ ಇಲ್ಲದವನಿಗೆ ವಾಹನ ಚಲಾಯಿಸಲು ಕೊಟ್ಟಿದ್ದು, ಕಾರಣ ಆರೋಪಿತನಾದ ನೀನು ಕಲಂ 196 ಐ.ಎಮ್.ವಿ. ಆಕ್ಟ ಸಂ.3 (5) ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

(ಆರೋಪಣೆಯನ್ನು ಆರೋಪಿತರಿಗೆ ಗೊತ್ತಿದ್ದ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಅವರ ಹೇಳಿಕೆಯನ್ನು ಪಡೆದು ನಮೂದಿಸಿದ್ದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣಿಕರಿಸುತ್ತೇನೆ.)

ಸಹಿ/-

ದಿನಾಂಕ 19-02-2026 ಪ್ರ.ದ.ನ್ಯಾ .ದಂ. ಸೇಡಂ.

**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ</u>**

**<u>ಸಿ.ಸಿ.ನಂ.770/2025</u>**

ಫಿರ್ಯಾದಿಃ ಕರ್ನಾಟಕ ಸರ್ಕಾರ ಪರಃ ಮಳಖೇಡ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ 3. ತಿಪ್ಪಣ್ಣ ತಂದೆ ಸಾಬಣ್ಣ ಮೋಳನ್ವರ
ವಃ 45 ವರ್ಷ, ಉಃ ಒಕ್ಕಲುತನ
ಎಲ್ಲರೂ ಸಾಃ ಹಾಬಾಳ ಟಿ. ಗ್ರಾಮ, ತಾಃ ಸೇಡಂ
ಜಿಃ ಕಲಬುರಗಿ

**<u>ಆಪಾದನೆ</u>**

ಪ್ರಃ-1) ಈಗ ಓದಿ ಹೇಳಲಾದ ಆರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿಯಾ?

ಉತ್ತರಃ-ಆ-3

ಪ್ರಃ-2) ನೀನು ತಪ್ಪನ್ನು ಒಪ್ಪಿಕೊಳ್ಳುತ್ತಿಯಾ ಅಥವಾ ವಿಚಾರಣೆ ನಡೆಯಬೇಕಾ?

ಉತ್ತರಃ-ಆ-3

ಸಹಿ/-

ದಿನಾಂಕ 19-02-2026 ಪ್ರ.ದ.ನ್ಯಾ.ದಂ. ಸೇಡಂ.